<u>**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**</u>

<u>**ಸ್ಪೆಷಲ್ ಸಿ. ನಂ.113/2023**</u>

ದಿನಾಂಕ 28.11.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 18 ಪ್ರಾಸಾ - 17

| | | |
|---|---|---|
| ಹೆಸರು | ಃ | ಓಂ ಪ್ರಕಾಶ್ |
| ತಂದೆಯ ಹೆಸರು | ಃ | ಅಂಜನಪ್ಪ ಟಿ ಪಿ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಡಿವೈಎಸ್‌ಪಿ, ಕುಣಿಗಲ್ |
| ವಾಸಸ್ಥಳ | ಃ | ಕುಣಿಗಲ್ |

<u>**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**</u>

ದಿನಾಂಕ 12.07.2022 ರಿಂದ ದಿನಾಂಕ 27.11.2023ರವರೆಗೆ ನಾನು ಡಿವೈಎಸ್ ಪಿ ಚನ್ನಪಟ್ಟಣ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದ ಕಡತವನ್ನು ದಿನಾಂಕ 05.06.2023 ರಂದು ಮುಂದಿನ ತನಿಖೆಗೆಂದು ಪ್ರಾಸಾ.16 ರಿಂದ ಪಡೆದು ತನಿಖೆ ಮುಂದುವರಿಸಿರುತ್ತೇನೆ.

3. ದಿನಾಂಕ 15.07.2023 ರಂದು ಚನ್ನಪಟ್ಟಣ ತಾಲ್ಲೂಲಕು ಕಛೇರಿಯಿಂದ ಕೃತ್ಯದ ಸ್ಥಳದ ಸರ್ವೇ ನಂ.56/12 ರ ಜಮೀನಿನ ಪಹಣಿ ಮತ್ತು ನಕ್ಷೆಯನ್ನು ಪಡೆದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಯನ್ನು ಚಾಸಾ 15 ರಿಂದ ಪಡೆದುಕೊಂಡಿದ್ದು, ಅವರು ತಮ್ಮ ಕಛೇರಿಯ ಮುಖಪುಟದೊಂದಿಗೆ ಜಮೀನಿನ ದಾಖಲಾತಿಗಳನ್ನು ಲಗತ್ತಿಸಿ ಕೊಟ್ಟಿರುತ್ತಾರೆ. ಸದರಿ ಮುಖಪುಟವನ್ನು ನಿಶಾನೆ ಪಿ 16 ಹಾಗು ಪಹಣಿಯನ್ನು ನಿಶಾನೆ ಪಿ 16(ಎ) ಎಂದು ಗುರುತಿಸಲಾಯಿತು.

4. ದಿನಾಂಕ 19.07.2023 ರಂದು ಆರೋಪಿಗಳು ಮತ್ತು ಪಿರ್ಯಾದುದಾರರ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡು, ಅದನ್ನು ಪರಿಶೀಲಿಸಿ ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ. ಅದನ್ನು ನಿಶಾನೆ ಪಿ 8 ಎಂದು ಈಗಾಗಲೇ ಗುರುತಿಸಲಾಗಿದೆ. ತನಿಖೆ ಮುಕ್ತಾಯಗೊಳಿಸಿ ಆರೋಪಿಗಳ ವಿರುದ್ದ ಸಾಕಷ್ಟು ಸಾಕ್ಷ್ಯಾ ಧಾರಗಳು ಇರುವ ಕಾರಣ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ.ಎಸ್.ಎನ್.ಜಿ., ವಕೀಲರಿಂದ ಆರೋಪಿಗಳ ಪರವಾಗಿಃ**

5. ನಾನು ಸ್ವೀಕರಿಸಿರುವಂತಹ ಪಹಣಿಯ ಜಮೀನಿಗೆ ಭೇಟಿ ನೀಡಿರುತ್ತೇನೆ. ಸದರಿ ಆರ್.ಟಿ.ಸಿ. ಪಿರ್ಯಾದುದಾರನಿಗೆ ಸೇರಿದ್ದಲ್ಲ ಎಂದರೆ ಸರಿ. ನಿಶಾನೆ ಪಿ 16(ಎ) ಜಮೀನಿಗೆ ಲಗತ್ತಾಗಿ ಆರೋಪಿಯ ತಾಯಿಯ ಜಮೀನು ಇದೆ ಎಂದರೆ ಸರಿ. ಸರ್ವೇ ನಂ.56/2 ಸರ್ಕಾರಿ ಜಮೀನು ಎಂದರೆ ಸಾಕ್ಷಿ ಎ.ಕೆ.ಕಾಲೋನಿ ನಿರ್ಮಾಣಕ್ಕಾಗಿ ಭೂಸ್ವಾಧೀನಗೊಂಡಿರುತ್ತದೆ ಎಂದು ಉತ್ತರಿಸಿರುತ್ತಾರೆ. ಆರೋಪಿಗಳ ತಾಯಿಗೆ ಸೇರಿದ ಜಮೀನು ಸರ್ವೇ ನಂ.56/1 ಎಂದರೆ ಸರಿ. ಸರ್ವೇ ನಂ.56/1 ರ ಪಹಣಿಯಲ್ಲಿ ಆರೋಪಿಗಳ ತಾಯಿ ಗೌರಮ್ಮ ಕೋಂ.ಚಿಕ್ಕಲಿಂಗೇಗೌಡರ ಹೆಸರು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.56/2 ರಲ್ಲಿ ಯಾರು ಯಾರಿಗೆ ನಿವೇಶನ ಮಂಜೂರಾಗಿದೆ ಎಂದು ತಿಳಿದುಕೊಂಡಿರಾ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಯಾರು ಯಾರಿಗೆ ನಿವೇಶನ ಮಂಜೂರಾಗಿದೆ ಎಂಬುವುದರ ಸಲುವಾಗಿ ದಾಖಲಾತಿಗಳನ್ನು ನಾನು ಈ ಪ್ರಕರಣದ ಕಡತದಲ್ಲಿ ಅಳವಡಿಸಿರುವುದಿಲ್ಲ. ಯಾರು ಯಾರಿಗೆ ನಿವೇಶನಗಳು ಮಂಜೂರಾಗಿರುವ ಬಗ್ಗೆ ದಾಖಲಾತಿಗಳನ್ನು ಪಡೆದುಕೊಳ್ಳಲು ನಿಮಗೇನಾದರೂ ಅಭ್ಯಂತರವಿತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಅದು ಸಿಕ್ಕಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

6. ಆರೋಪಿಯ ತಾಯಿಯ ಹೆಸರಿನಲ್ಲಿರುವಂತಹ ಜಮೀನಿನಲ್ಲಿ ಪಿರ್ಯಾದುದಾರರು ಅಕ್ರಮ ಸ್ವಾಧೀನ ಹೊಂದಿದ್ದ ಕಾರಣ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಕ್ಷೆಯ ಪ್ರಕಾರ ಸರ್ವೇ ನಂ.56/1 ಕ್ಕೆ 56/2 ಲಗತ್ತಾಗಿದೆ ಎಂದರೆ ಸರಿ. ಆರೋಪಿಯ ತಾಯಿಯ ಹೆಸರಿನಲ್ಲಿರುವಂತ ಜಮೀನಾದ ಸರ್ವೇ ನಂ.56/1 ನ್ನು ವಿಜಯಮ್ಮ

ನಿಂಗರಾಜು, ಸಿದ್ದರಾಮು ಮತ್ತು ತಮ್ಮಯ್ಯ ರವರುಗಳು ಅಕ್ರಮವಾಗಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿಗಳ ತಾಯಿ ಗೌರಮ್ಮ ತನ್ನ ಜಮೀನಾದ ಉಜ್ಜನಹಳ್ಳಿ ಗ್ರಾಮದ ವಿರೂಪಾಕ್ಷಿಪುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ಸರ್ವೇ ನಂ.56/1 ಕ್ಕೆ ಅರ್ಜಿ ನೀಡಿ ಹದ್ದುಬಸ್ತು ಕ್ರಮವನ್ನು ದಿನಾಂಕ 04.02.2023 ರಂದು ಜರುಗಿಸಲಾಗಿದೆ ಎಂದರೆ ಸರಿ. ಸದರಿ ನಕ್ಷೆ ಈಗ ನನಗೆ ತೋರಿಸಿದಂತಹ ದಾಖಲಾತಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಗೌರಮ್ಮನ ಅರ್ಜಿಯನ್ವಯ ತಹಶೀಲ್ದಾರ್ ರವರು ತಯಾರಿಸಿರುವಂತಹ ನಕ್ಷೆಯಲ್ಲಿ ಒತ್ತುವರಿಯಾದಂತಹ ಜಮೀನನ್ನು ಪ್ರತ್ಯೇಕವಾಗಿ ಗುರುತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗಳು ತಮ್ಮ ಜಮೀನಿನನ್ನು ಬಿಟ್ಟುಕೊಡಲು ಪಿರ್ಯಾದುದಾರರಿಗೆ ಕೇಳಿರುವ ಕಾರಣ ಈ ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ದೂರು ಕೊಟ್ಟ ಸಮಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿತ್ತು ಎಂದರೆ ಸರಿ. ಪಿರ್ಯಾದಿ ಮತ್ತು ಇತರರ ವಿರುದ್ಧ ಚನ್ನಪಟ್ಟಣ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.ನಂ.180/2023 ದಾಖಲಾಗಿರುತ್ತದೆ ಎಂದರೆ ಸರಿ. ಆರೋಪಿಗಳು ಯಾವುದೇ ರೀತಿ ಪಿರ್ಯಾದುದಾರರನ್ನು ನಿಂದಿಸಿರುವುದಿಲ್ಲ, ಕೊಲೆ ಬೆದರಿಕೆ ಹಾಕಿರುವುದಿಲ್ಲ, ಜಾತಿ ನಿಂದನೆ ಮಾಡಿರುವುದಿಲ್ಲ, ಆದರೂ ಸಹ ಆರೋಪಿಗಳ ಮೇಲೆ ವೈಶಮ್ಯವಿರುವ ಕಾರಣ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಯಾವುದೇ ಕೃತ್ಯ ಸಾಬೀತಾಗದೇ ಇದ್ದರೂ ಸಹ ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**